


ಕೃತಿಯಲ್ಲಿನ ಪಾತ್ರಗಳನ್ನೂ ಸಹ ಒಳ ಹೊಕ್ಕು ಅರಿತುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಅನುವಾದಕ ಮೂಲ ಲೇಖಕ ಮತ್ತು ಅವನ ಪಾತ್ರಗಳಿಗೆ ಮನೋವಿಜ್ಞಾನಿಯಾಗುತ್ತಾನೆ. ತಾಯಿಯ ಗರ್ಭದೊಳಗಿನಿಂದ ಮಗು ಜನಿಸಿದಾಗ ತಾಯಿಗೆ ಎಷ್ಟು ಆನಂದವಾಗುವುದೋ, ಅದಕ್ಕೂ ಮೀರಿದ ಆನಂದ ಉತ್ತಮವಾದ ಅನುವಾದಕನಿಗಾಗುತ್ತದೆ; ನಂತರ ಆ ಅನಂದ ಓದುಗನಿಗೂ ವರ್ಗಾವಣೆಯಾಗುತ್ತದೆ.

5 ನಾನು ಈಚೆಗೆ ಕನ್ನಡದ ಮಹತ್ವದ ಸಮಕಾಲೀನ ಕತೆಗಳನ್ನು ಹಿಂದಿಗೆ ಅನುವಾದಿಸುತ್ತಿದ್ದೇನೆ. ಅವು ಹಿಂದಿಯ ಪತ್ರಿಕೆಗಳಲ್ಲಿ ಪ್ರಕಟಗೊಂಡಾಗ, ಆ ಕತೆ ಹಿಂದಿಯಲ್ಲಿ ಪ್ರಕಟವಾಗಿದೆ ಎಂಬ ಮೊದಲ ಸೂಚನೆ ನನಗೆ ಅದೆಷ್ಟೋ ಬಾರಿ ಹಿಂದಿಯ ಓದುಗರಿಂದ ಲಭಿಸಿದೆ! ಹಿಂದಿ ಪ್ರದೇಶದಲ್ಲಿರುವ ಕೆಲವು ಸಾಹಿತ್ಯಿಕ ಬಳಗಗಳು ಇಂಥ ಕಥೆಗಳ ಬಗ್ಗೆ ಸೆಮಿನಾರ್ ಮಾಡಿದ ಬಗ್ಗೆಯೂ ನನಗೆ ಮಾಹಿತಿಯನ್ನು ಕಳುಹಿಸುತ್ತವೆ. ಕನ್ನಡದ ಕಥೆಗಳು ಮತ್ತು ಕಾದಂಬರಿಗಳ ಅನುವಾದಕ್ಕೆ ಬೇಡಿಕೆ ಇದೆ. ಕನ್ನಡದಲ್ಲಿ ಈಚೆಗೆ ವಿಶ್ವ ಕಥಾಸಾಹಿತ್ಯದ ಸ್ತರದಲ್ಲಿ ನಿಲ್ಲುವಂಥ ಕಥೆಗಳು ಬರುತ್ತಿವೆ ಎಂದರೆ ಉತ್ಪ್ರೇಕ್ಷೆಯಾಗದು. ಆದರೆ ಅನುವಾದದ ಕೊರತೆ, ಅನುವಾದವಾದರೂ ಪ್ರಕಟಣೆಯ ಸೀಮಿತ ಅವಕಾಶಗಳಿಂದಾಗಿ ಅವು ಮುನ್ನೆಲೆಗೆ ಬರುತ್ತಿಲ್ಲ. ಹಿಂದಿಯ ಪ್ರಕಾಶಕರು ಅನುವಾದಿತ ಕೃತಿಗಳನ್ನು ಹೊರ ತರಲು ಮುಂದೆ ಬರುತ್ತಿಲ್ಲ, ಬಂದರೂ ಅನುವಾದಕರ ಶ್ರಮಕ್ಕೆ ಅವರು ಬೆಲೆ ಕೊಡುವುದಿಲ್ಲ. ಅನುವಾದಕರೇ ಅವರಿಗೆ ಹಣ ಕೊಟ್ಟು ಕೃತಿಗಳನ್ನು ಪ್ರಕಟಿಸುವ ಪರಿಸ್ಥಿತಿ ಇದೆ. ಈ ದಿಸೆಯಲ್ಲಿ ಉತ್ತಮ ಅನುವಾದಕ ಖಂಡಿತ ಪ್ರಯತ್ನಿಸಲಾರ. ಒಂದು ವೇಳೆ ಅನುವಾದಿತ ಕೃತಿಗಳು ಪ್ರಕಟಗೊಂಡರೂ, ಪ್ರಕಾಶಕರು ಎಷ್ಟು ಪ್ರತಿಗಳನ್ನು ಮುದ್ರಿಸುತ್ತಾರೆ, ಮರು ಮುದ್ರಣಗಳು ಯಾವಾಗ ಆಗುತ್ತಿರುತ್ತವೆ ಎಂಬ ಮಾಹಿತಿ ಸಿಗುವುದಿಲ್ಲ. ಆದರೆ ಅನುವಾದಿತ ಕೃತಿಗಳಿಗೆ ಇಡೀ ದೇಶದಲ್ಲಿ ಉತ್ತಮ ಮಾರುಕಟ್ಟೆ ಇದೆ ಎಂಬ ವಿಶ್ವಾಸ ನನಗಿದೆ. ಆದರೆ ಯಾವ ಪ್ರಕಾಶಕರೂ ಸಹ ಇದಕ್ಕೆ ಸಹಮತವನ್ನು ವ್ಯಾಪಾರದ ದೃಷ್ಟಿಯಿಂದ ವ್ಯಕ್ತಪಡಿಸುವುದಿಲ್ಲ.

6 ರಾಜಕಾರಣ ಇಂದು ಎಲ್ಲಾ ಕ್ಷೇತ್ರಗಳಲ್ಲೂ ಆವರಿಸಿದೆ. ಜಾತಿ, ಧರ್ಮದ ಹೆಸರಿನಲ್ಲಿ, ಪುಸ್ತಕಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳನ್ನು ಟೀಕಿಸುವುದು, ಕೃತಿಕಾರನ ವಧೆಯ ಮಟ್ಟಕ್ಕೂ ಹೋಗುವುದು ದೇಶದೆಲ್ಲೆಡೆ ನಡೆಯುತ್ತಿದೆ. ಇದೂ ಸಹ ಒಂದು ರೀತಿಯ ರಾಜಕೀಯವೇ. ಸಾಹಿತ್ಯ ರಚನೆಯ ಮೇಲೆ ಸೆನ್ಸಾರ್ ನಿಯಮಗಳು ಸಹ ಆಗಾಗ ಪ್ರಭಾವವನ್ನು ಬೀರುತ್ತವೆ. ಅನುವಾದಕರನ್ನೂ ಸಹ ಕೋರ್ಟಿಗೆ ಎಳೆದ ಉದಾಹರಣೆಗಳಿವೆ. ಅನುವಾದಿತ ಕೃತಿಗಳು ಮತ್ತು ಅನುವಾದಕರ ಸಾಧನೆಗೆ ದೇಶದಲ್ಲಿ ಅನೇಕ ಪ್ರತಿಷ್ಠಿತ ಸಂಸ್ಥೆಗಳು, ಸರ್ಕಾರಿ ಸಂಸ್ಥೆಗಳು ಪ್ರತಿವರ್ಷ ಪುರಸ್ಕಾರಗಳನ್ನು ಕೊಡುತ್ತವೆ. ಪುರಸ್ಕಾರಗಳ ಆಯ್ಕೆಯಲ್ಲಿ ಕೆಲವೊಮ್ಮೆ ರಾಜಕಾರಣದಲ್ಲಿರುವವರು ಮಾತ್ರವಲ್ಲ, ಅನೇಕ ಸಾಹಿತಿಗಳೂ ತಮಗೆ ಬೇಕಾದವರಿಗೆ ಪ್ರಶಸ್ತಿಗಳು ಸಿಗಲು ಶಿಫಾರಸ್ ಮೂಲಕ ರಾಜಕಾರಣ ಮಾಡುತ್ತಾರೆ.

7 ಪ್ರತಿಯೊಬ್ಬ ಲೇಖಕರು ಸಹ ತಮ್ಮ ಕೃತಿಗಳು ಬೇರೆ ಬೇರೆ ಭಾಷೆಗಳಲ್ಲಿ ಅನುವಾದಗೊಳ್ಳಬೇಕೆಂದು ಬಯಸುವುದು ಸಹಜ. ಆದರೆ ಎಲ್ಲಾ ಕೃತಿಗಳು ಅನುವಾದಕ್ಕೆ ಯೋಗ್ಯವಾಗಿರಬೇಕಲ್ಲ! ಯೋಗ್ಯ ಕೃತಿಗಳು ಇಂಗ್ಲಿಷ್ ಭಾಷೆಗೆ ಅನವಾದಗೊಂಡರೆ ಆ ಮೂಲಕ ದೇಶ ವಿದೇಶಗಳ ಭಾಷೆಗೆ ಅನುವಾದಗೊಳ್ಳಲು ಸಾಧ್ಯವಾಗುತ್ತದೆ; ಈ ಮೂಲಕ ಜಾಗತಿಕ